

ತಂದನೋ ಎನ್ನುವಾಗಲೇ ಗೊಣಗುತ್ತಾ ಹತ್ತಿರತ್ತಿರ ಬಂದ. ನನ್ನ ವೇಷಭೂಷಣ ನೋಡಿ ಕೊಂಚ ತಡಬಡಿಸಿದ. ಕೆರೆ ವೀಕ್ಷಣೆಗೆ ಬಂದ ಮೀನುಗಾರಿಕೆ ಇಲಾಖೆಯ ಅಧಿಕಾರಿಯೇ ಇರಬಹುದೋ ಏನೋ ಎಂದು ಹುಸಿ ನಗೆ ನಕ್ಕ. ಜೊತೆಗೆ ನನ್ನ ಬಳಿ ಇದ್ದ ಮಾರುದ್ದದ ಕ್ಯಾಮೆರಾಗಳ ನೋಡಿ ಆತ ಸಂಪೂರ್ಣ ಗಲಿಬಿಲಿಗೊಂಡಿದ್ದ.

ಓಹೋ! ಫಿಶರ್ರು, ಫೋಟಾ ತೆಗೆಯೋರಾ ಸಾಮಿ, ಯಾವ ಟೀವಿಲಿ ಬರುತ್ತೆ? ಎಂದು ಪಿಳ್ಳನೆ ಹಲ್ಲುಬಿಟ್ಟ. ಪಟ ತೆಗೆಯಲು ಕೆರೆಕಟ್ಟೆ ಅಲೆಯುವ ನಮಗಿದು ಎಲ್ಲೇ ಹೋದರೂ ಸಿಗುವ ಮಾಮೂಲಿ ದೇಶಾವರಿ ವಿಚಾರಣೆ. ಸಂಕ್ಷಿಪ್ತವಾಗಿ ನನ್ನ ಘನಕಾರ್ಯವ ವಿವರಿಸಿಕೊಂಡೆ. ಅವನಿಗೆ ತಲೆಬುಡವೂ ತಿಳಿಯಲಿಲ್ಲ. ಯಾವುದೋ ಹುಚ್ಚಾಸ್ಪತ್ರೆ ಕೇಸ್ ಎಂತಲೋ? ಕೆಲಸವಿಲ್ಲದ ಮೂಳನೆಂದೋ! ದುಡ್ಡು ಸೊಕ್ಕು ಹೆಚ್ಚಾಗಿರುವ ಶೋಕಿವಾಲನೋ ಇರಬಹುದೆಂದು ನಿರ್ಧರಿಸಿ ಆತ ಮತ್ತೆ ಗೊಣಗೊಣ ಎನ್ನುತ್ತಾ ಹೊರಟ. ಗಕ್ಕನ್ನೊಮ್ಮೆ ನೆನಪಾಗಿ ತಿರುಗಿ "ಬೆಳಿಗ್ಗೆ ಬೇಗ ಬಂದ್ಬಿಡಿ ನವುಲು ಸಿಕ್ತವೆ" ಎಂದ. ಅದೇನೋ ನವಿಲಿನ ಪಟ ತೆಗೆಯುವುದು ಎಂದರೆ ಒಂತರ ಅಲರ್ಜಿಯೇ ಬಂದು ಹೋಗಿದೆ. ನಾವು ಹೋದಲ್ಲಿ ಬಂದಲ್ಲಿ ಅನೇಕರು ನವಿಲಿನ ಚಿತ್ರ ತೆಗಿಯಿರಿ ಎಂದು ಹೇಳುತ್ತಾರೆ. ಯಾಕೆ ಪಟ ತೆಗೆಯುವ ಸಮಯದಲ್ಲಿ ಅನೇಕರು ಇದೊಂದೇ ಮಾತನ್ನು ದೀಕ್ಷೆ ಪಡೆದಂತೆ ನುಡಿಯುತ್ತಾರೆ ಎಂಬುದು ನನಗೀಗಲೂ ಒಗಟು.

ಇದರ ನಡುವೆ ಆಕಾಶದಲ್ಲಿ ಹಾರುತ್ತಾ ಇದ್ದ ಏರೋಪ್ಲೇನ್ ಚಿಟ್ಟೆ ಕೆರೆಯ ನೀರಿನ ಮೇಲೆ ಬಂದು ತನ್ನ ಬಾಲದಿಂದ ನೀರನ್ನು ಮೊಟಕಿತು. ನೀರು ಕುಡಿಯುವುದೇ ಆಗಿದ್ದಲ್ಲಿ ಮುಸುಡಿ ಮುಂದು ಮಾಡಬೇಕಾಗಿದ್ದ ಚಿಟ್ಟೆ ಬಾಲದಲ್ಲೇಕೆ ನೀರ ಕುಕ್ಕುತ್ತಿದೆ ಎಂದು ಅಚ್ಚರಿಯಾಯಿತು. ಹೀಗೆ ಆಗಸ ಮಾರ್ಗವಾಗಿ ನೀರಿನ ಹತ್ತಿರಕ್ಕೆ ಬಂದು ಹಕ್ಕಿಗಳೂ ಕೂಡ ನೀರನ್ನು ಗುಟುಕೇರಿಸಿಕೊಳ್ಳುತ್ತವೆ. ಆದರೆ, ಇದರ ವರ್ತನೆ ಕೊಂಚ ಬೇರೆ ಥರ ಇತ್ತು. ನಂತರ